ವಿಷಯ : ಕೊಡಗು ಜಿಲ್ಲೆಯ ಮುಜರಾಯಿ ದೇವಸ್ಥಾನಗಳ ನಿರ್ವಹಣೆ.

ಪ್ರ. 121 (195) ಶ್ರೀ ಎಂ. ಎಂ. ನಾನುಯ್ಯ (ಮಡಿಕೇರಿ).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುವ ಕೊಡಗು ಜಿಲ್ಲೆಯ ದೇವಸ್ಥಾನಗಳ ಸಂಖ್ಯೆ ಮತ್ತು ಹೆಸರು.

(ಆ) ಇಲಾಖಾವತಿಯಿಂದ ಸದರಿ ದೇವಸ್ಥಾನಗಳ ನಿರ್ವಹಣೆಗಾಗಿ ಹಣವನ್ನು ಖರ್ಚು ಮಾಡ ಲಾಗುತ್ತಿದೆಯೇ ?

(ಇ) ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಖರ್ಚುಮಾಡಿದ ಹಣದ ಮೊತ್ತವೆಷ್ಟು ?

ಶ್ರೀ ಪಿ. ಎಲ್. ಪಾಟೀಲ್ (ಮಾನ್ಯ ಕಂದಾಯ ಮಂತ್ರಿಗಳು).—

(ಅ) ಆರು ದೇವಸಾನಗಳಿದ್ದು ಅವುಗಳ ಹೆಸರು ಈ ಕೆಳಗಿನಂತಿವೆ :

(1) ಓಂಕಾರೇಶ್ವರ ದೇವಸ್ಥಾನ, ಮಡಿಕೇರಿ.
(2) ಮಹಾಲಿಂಗೇಶ್ವರ ದೇವಸ್ಥಾನ, ಪಾಲೂರು.
(3) ಹರಿಶ್ಚಂದ್ರ ದೇವಸ್ಥಾನ, ಪೊಲೂರು.
(4) ರಾಮೇಶ್ವರ ದೇವಸ್ಥಾನ, ಇರ್ಪು, ಶ್ರೀಮಂಗಲ.
(5) ತಲಕಾವೇರಿ ದೇವಸ್ಥಾನ ಮತ್ತು ಭಾಗಮಂಡಲ ದೇವಸ್ಥಾನ.
(6) ಸುಬ್ರಾಯ ದೇವಸ್ಥಾನ ಕಕ್ಕೇರಿ.

(ಆ) ಹೌದು.

(ಇ)

ವರ್ಷ	ಮೊಬಲಗು (ರೂಪಾಯಿಗಳು.)
1980-81	19078·00
1981-82	19078·00
1982-83	ಇಲ್ಲ

ವಿಷಯ: ವಿವಿಧ ಶೀರ್ಷಿಕೆಗಳಲ್ಲಿ ರೈತರಿಗೆ ನೀಡಲಾದ ರಿಯಾಯಿತಿ ಬಗ್ಗೆ.

ಪ್ರ. 122 (143) ಶ್ರೀ ಕೆ. ಎಸ್. ಕಾಳಮರಿಗೌಡ (ಪೆರಿಯಾಪಟ್ಟಣ).— ಮಾನ್ಯ ಸಹಕಾರ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ .—

(ಅ) ವಿವಿಧ ಶೀರ್ಷಿಕೆಗಳಲ್ಲಿ ರೈತರಿಗೆ ನೀಡಿರುವ ಸಾಲಗಳ ಮೇಲೆ ಸರ್ಕಾರವು ರಿಯಾಯಿತಿಗಳನ್ನು ಕೊಡಲಾಗಿದೆಯೇ ;

(ಆ) ಪ್ರತಿಯೊಂದು ಶೀರ್ಷಿಕೆಯಲ್ಲಿ ರಿಯಾಯಿತಿಗಳ ಮೂಲಕ ಕೊಡಲ್ಪಟ್ಟ ಹಣದ ಮೊತ್ತ (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಇ) ಈ ರಿಯಾಯಿತಿಗಳಿಂದ ಸರ್ಕಾರವು ಭರಿಸಬೇಕಾದ ಹಣದ ಮೊತ್ತ (ಜಿಲ್ಲಾವಾರು ವಿವರಗಳನ್ನು ನೀಡುವುದು). ;

(ಈ) ಈ ರಿಯಾಯಿತಿಗಳಿಂದ ಉಪಯೋಗ ಪಡೆದ ರೈತರ ಸಂಖ್ಯೆ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

(ಅ) ಹೌದು. ಸಹಕಾರ ಇಲಾಖೆಗೆ ಸಂಬಂಧಪಟ್ಟಂತೆ ರೈತರಿಗೆ ಯಾವ ಶೀರ್ಷಿಕೆಯಲ್ಲಿಯೂ ಸಾಲ ನೀಡಿರುವುದಿಲ್ಲ. ಆದರೆ ರೈತರಿಗೆ ಸಹಕಾರ ಸಂಘಗಳಿಂದ ನೀಡಿದ ಸಾಲ ಮರುಪಾವತಿ ಮಾಡಲು ಕೆಲವು ರಿಯಾಯಿತಿಗಳನ್ನು ಅಂದರೆ ಬಡ್ಡಿ ಸಹಯಧನ, ಬಡ್ಡಿಯಲ್ಲಿ ರಿಯಾಯಿತಿ ಮತ್ತು ಉತ್ತೇಜಕ ಸಹಾಯ ಧನ ಕೊಡಲಾಗಿದೆ. ಇದೂ ಅಲ್ಲದೆ ಭೂ ಅಭಿವೃದ್ಧಿ ಬ್ಯಾಂಕುಗಳಿಂದ ಪಾಣಿಜ್ಯ ಬ್ಯಾಂಕುಗಳಿಂದ ಗ್ರಾಮೀಣ ಬ್ಯಾಂಕುಗಳಿಂದ ನೀರಾವರಿ ಬಾವಿ ತೋಡಲು ಸಾಲ ಪಡೆದ ರೈತರಿಗೆ ಕೊಡಲಾಗಿದೆ.

(ಆ) ವಿವರಗಳನ್ನು ಅನುಬಂಧ I ಮತ್ತು IIಗಳಲ್ಲಿ ಕೊಡಲಾಗಿದೆ (ಸಹಕಾರಿ ಸಾಲಗಳಿಗೆ ಸಂಬಂಧಪಟ್ಟಂತೆ).

(ಇ) ವಿವರಗಳು ಅನುಬಂಧ 111 ರಲ್ಲಿ ಕೊಡಲಾಗಿವೆ. (ರೈತರಿಗೆ ಕೆಲವಾರು ಶೀರ್ಷಿಕೆಗಳಲ್ಲಿ ನೀಡಿದ ಸಾಲಗಳ ಮೇಲೆ ಕೊಡಲ್ಪಟ್ಟ ರಿಯಾಯಿತಿ).